ಅವನು ಸೈಕಲನ್ನು ಮತ್ತೂ ಸಮೀಪಕ್ಕೆ ಎಳೆದುಕೊಂಡು ಹೇಳಿದ, "ಉದ್ದ ಕತೆಯನ್ನು ಸಂಕ್ಷೇಪಿಸಿ ಹೇಳಿ ಸಾರ್, ನಿಮ್ಮ ಹೆಸರೇನು?"

"ಓಹ್ ಐ ಸೀ!" ಬಂಧುಗಳು ಹೇಳಿದರು, "ನನ್ನ ಹೆಸರು ನೀಲ್ ಮಾಧವ್ ದಾಸ್. ಐ.ಎ.ಎಸ್. ಆದ ನಂತರ ಈಗ ಕಾಶ್ಮೀರ್ ಕಮೀಶನ್‌ನಲ್ಲಿದ್ದೇನೆ. ಫಾದರ್ ಇನ್ ಲಾ ಅಕಸ್ಮಾತ್ ಎಕ್ಸ್‌ಪೈರ್ ಆದರಲ್ಲ, ಅದಕ್ಕೇ ರಜದ ಮೇಲೆ ಬಂದಿದ್ದೆ, ಯೂ ಸೀ. ನೀವು ಮರೆತಿರ ಅಂತ ಅನ್ನಿಸುತ್ತೆ? ಹೋಗಲಿ, ಎಲ್ಲಾ ನಿಮ್ಮ ದಯೆ, ನಮಸ್ಕಾರ."

ಅಶೋಕ ನಾಚಿಕೆಯಿಂದ ತಲೆತಗ್ಗಿಸಿ ಹೇಳಿದ, "ಓಹೋ, ನಾವು ಅದೆಷ್ಟು ಹಗಲು, ಅದೆಷ್ಟು ರಾತ್ರಿ ಒಟ್ಟಿಗೆ ಇದ್ದೆವು! ನೀವು ಸಮೋಸಾ ತಿನ್ನಲು ಇಷ್ಟ ಪಡುತ್ತಿದ್ದರಲ್ಲ, ಅದಕ್ಕೇ ಪಾರ್ಕ್ ಹೋಟೆಲ್– ನರೀಬಾಬು ಮತ್ತೆ ಹೋಗಲಿ ಬಿಡಿ! ಎಲ್ಲಾ ನೆನಪಿದೆ, ಸಾರ್! ನಿಮ್ಮನ್ನು ಎಲ್ಲಿಯಾದರೂ ಮರೆಯಲು ಸಾಧ್ಯವೇ? ನನ್ನ ನರ್ವಸ್ ಬ್ರೇಕ್ ಆಗಿರುವ ವಿಷಯ ತಿಳಿದು ನಿಮಗೆ ದುಃಖವಾಗಬಹುದು. ನನಗೇನೂ ನೆನಪಿರುವುದಿಲ್ಲ. ಹೇಳಿ, ಏನು ಮಾಡುವುದು?"

ಆದರೆ ಬಂಧುಗಳಿಗೆ ನಂಬಿಕೆ ಬರುತ್ತಿರಲಿಲ್ಲ, ಮತ್ತೆ ಬಂದು ಹೇಳಿದರು, "ಒಳ್ಳೇದು ನಮಸ್ಕಾರ! ಕಾಶ್ಮೀರಕ್ಕೆ ಹೋದ ನಂತರ ಪತ್ರವನ್ನು ಬರೆಯಿರಿ, ಸಾರ್!"

ಬಂಧುಗಳು ಕೇಳದವರಂತೆ ಹೊರಟು ಹೋಗುತ್ತಿದ್ದಾರೆ.

ಕಡೆಗೆ ರಸ್ತೆಯಲ್ಲಿ ನಿತ್ಯ ಸುತ್ತಮುತ್ತಲಿನಿಂದ 'ನಮಸ್ಕಾರ, ನಮಸ್ಕಾರ', 'ಹೇಳಿ, ಅಶೋಕ್ ಬಾಬು ಹೇಗಿದ್ದೀರಿ?' ಎಂಬ ವಾಕ್ಯಗಳು ಕೇಳಿಬರುತ್ತಿದ್ದವು. ಅಭ್ಯಾಸ ಬಲದಂತೆ ಅವನೂ ಪ್ರತಿನಮಸ್ಕಾರ, ಕಷ್ಟ ಸುಖದ ಮಾತುಗಳನ್ನು ಹೇಳುತ್ತಿದ್ದ. ಆದರೆ ಇಂದು ಅವನು ಹೆಸರನ್ನು ಹುಡುಕುತ್ತಿದ್ದಾನೆ, ಹೆಸರು ಸಿಗುವುದಿಲ್ಲ. ಇವರೊಂದಿಗೆ ಇಷ್ಟು ಗಟ್ಟಿ ಸಂಬಂಧ, ಇಷ್ಟು ದಿನಗಳ ನಗು–ಸಂತಸ, ಸುಖ–ದುಃಖದ ಜೀವನ–ಪಯಣ... ಆದರೆ ಹೆಸರು ನೆನಪಾಗುವುದಿಲ್ಲ! ಮತ್ತೆ ಅನುಮಾನ–ಭಯ; ಮತ್ತೆ ಎಲ್ಲಿಯಾದರು ಸಮಸ್ಯೆ ಎದುರಾದರೆ? 'ಕ' ಜಾಗದಲ್ಲಿ 'ಬ' ಎಂದರೆ! ಅದಕ್ಕೇ ಅವನು ಯಾರನ್ನಾದರು ಕರೆಯುವಾಗ ಹೆಸರು ಹೇಳುವುದಿಲ್ಲ, ಒರಿಯಾ ಭಾಷೆಯ ಸಂಬೋಧನೆ, 'ಎ', 'ಹೇ', 'ಸಾಹೇಬರೇ'– ಇವುಗಳನ್ನು ಉಪಯೋಗಿಸುತ್ತಾನೆ.

ಎರಡೂ ಪುಸ್ತಕಗಳನ್ನು ತೆಗೆದುಕೊಳ್ಳಬೇಕು. ಬಹುಶಃ ಇದೇ ಆ ಸಾಹೇಬರ ಮನೆ? ಅಶೋಕ್ ಬಾಬು ಬಾಗಿಲ ಬಳಿ ನಿಂತು ಕಳವಳದಿಂದ ಯೋಚಿಸಿದ. ಜಗತ್ತಿನಲ್ಲಿ ಎಷ್ಟೊಂದು ಜನರಿದ್ದಾರೆ; ಯಾರೂ ಜನರ ಆಸರೆಯಿಲ್ಲದೆ ಮುಂದುವರೆಯಲಾರರು. ಒಂದೇ ರೀತಿಯ ಮನುಷ್ಯರು, ಒಂದೇ ರೀತಿಯಲ್ಲಿ ಆರಂಭ. ಒಂದೇ ರೀತಿಯಲ್ಲಿ ಮುಕ್ತಾಯ, ಅಧಿಕಾರದ ವಿಷಯದಲ್ಲಿ ವ್ಯತ್ಯಾಸ; ಎಷ್ಟು ಜನ ಸಹೋದರರೋ, ಅಷ್ಟು ಮನೆ; ಎಷ್ಟು ವಧುಗಳೋ, ಅಷ್ಟು ವರರು; ಆದರೆ ಹೆಸರನ್ನು ನೆನಪಿಟ್ಟುಕೊಳ್ಳದೆ ಹೇಗೆ ಸಾಗುವುದು? ಹೆಸರನ್ನು ನೆನಪಿಟ್ಟುಕೊಳ್ಳಲೇ ಬೇಕು, ಅದಕ್ಕಾಗಿ ಎಷ್ಟೇ ಬ್ರಾಹ್ಮಿ, ತುಪ್ಪ, ಟಾನಿಕ್, ಔಷಧಗಳು ಖರ್ಚಾಗಲಿ. ತಿರುಗುವ ಜಗತ್ತಿನೊಂದಿಗೆ, ಜನರೊಂದಿಗೆ ಒಂದೇ ಲಗಾಮು–ಅದೇ ಹೆಸರು; ಅದನ್ನು ಯಾವ ಉಪಾಯ ಮಾಡಿಯಾದರೂ ಅನವರತವಾಗಿಟ್ಟುಕೊಳ್ಳಬೇಕು. ಆದರೆ ಯೋಚಿಸಿ ಯೋಚಿಸಿ, ನೆನಪುಗಳು ತುಂಡಾಗುತ್ತವೆ, ಬಾಷ್ಪವಾಗಿ ಹಾರುತ್ತವೆ. ಆ ಸಾಹೇಬರ ಮನೆ ಬಹುಶಃ ಇದೇ.

ಅಶೋಕ ಸ್ವಲ್ಪ ಹೊತ್ತು ಅತ್ತ ಇತ್ತ ಉತ್ಸುಕತೆಯಿಂದ ನೋಡಿ ಯೋಚಿಸಿದ, ಹೆಸರೇನು? ಇವರ ಹೆಸರೇನು? ಹೇಗಾದರೂ ಮಾಡಿ ಇವರಿಂದ ಪುಸ್ತಕಗಳನ್ನು ವಾಪಸ್ ಪಡೆಯಲೇಬೇಕು. ಇವರು ನಗರದ ಗಣ್ಯ ವ್ಯಕ್ತಿಗಳು ಎಂಬುದು ನೆನಪಿದೆ; ಪುಸ್ತಕಗಳನ್ನು ತೆಗೆದುಕೊಂಡು ಮರೆಯುವುದೇ ಇವರ ಸ್ವಭಾವ. ಇವರಿಗೆ ತಲೆಬಾಗಿದರೆ, ವೈಯಕ್ತಿಕ ಆಸ್ತಿಯನ್ನು ಉಳಿಸಿಕೊಳ್ಳುವುದು ಸಹ ಕಷ್ಟವಾಗುವುದು.